


ಜವಾಬ್ದಾರಿ ಕೊಡುವುದು ಎಂದು ತೀರ್ಮಾನಿಸಿ ಆತನ ಮುಖವನ್ನೇ ದಿಟ್ಟಿಸಿದಳು.

ಈತನನ್ನು ಎಲ್ಲೋ ನೋಡಿದ ನೆನಪಾಯಿತು.

ಮತ್ತೊಂದು ಸಲ ಮಗದೊಂದು ಸಲ ಹಾಗೆಯೆ ಮುಖ ನೋಡಿದಳು. ಈತನನ್ನು ನೋಡಿಲ್ಲ. ಈತನ ಫೋಟೊ ನೋಡಿದ್ದು ನೆನಪಾಯಿತು. ಅದೇ ಒಂದು ಪುಸ್ತಕ ಹಿಂದೆ ಇದ್ದ ಫೋಟೊ ಗಮನಿಸಿದಳು. ತಾನು ಅಂದುಕೊಂಡ ಪುಸ್ತಕ ರಚಿಸಿದ ಮಹಾಕವಿ ಈತನೇ ಇರಬಹುದೇ? ಎಂದು ಪ್ರಶ್ನಿಸಿಕೊಂಡಳು.

ಒಂದು ದಿನ ವಾಹನಗಳ ದಟ್ಟಣೆಯಿಂದ ತನ್ನ ಕಾರು ಗಾಂಧಿ ಸರ್ಕಲ್ಲಿನಲ್ಲಿ ನಿಂತಾಗ ಒಬ್ಬ ಪಾಪದ ಹುಡುಗ ಆ ಬಿರು ಬಿಸಿಲಿನಲ್ಲಿ ಈ ಪುಸ್ತಕ ಮಾರುತ್ತಿದ್ದ, ಗುಜರಿ ಪುಸ್ತಕ ಮಾರುವ ಆತನ ಕಂಗಳಲ್ಲಿದ್ದ ಹಸಿವನ್ನು ನೋಡಿ ಕರೆದಾಗ ಆತನೇ ಹೇಳಿದ್ದ: 'ಎರಡು ವರ್ಷದಿಂದ ನನ್ನಲ್ಲಿ ಒಂದು ಪುಸ್ತಕ ಬಂದಿದೆ. ಯಾರೂ ತೆಗೆದುಕೊಳ್ಳುತ್ತಿಲ್ಲ. ನೀವಾದರೂ ತೆಗೆದುಕೊಳ್ಳಿ ಮೇಡಂ ಪ್ಲೀಸ್, ಇದರ ಬೆಲೆ 50 ರೂಪಾಯಿ ಇದೆ. 5 ರೂಪಾಯಿ ಕೊಟ್ಟರು ಸಾಕು' ಎಂದಿದ್ದ.

ಆತನ ಬೆವರು ಸೂಸುವ ಕಂಗಳು ನೋಡಿ ಕರುಣೆ ಹುಕ್ಕಿ ಬಂದಿತ್ತು. 100 ರೂಪಾಯಿಗಳನ್ನು ಆ ಮಗುವಿನ ಕೈಗಿಟ್ಟು ಟ್ರಾಫಿಕ್ ದಾಟಿದ್ದಳು. ಆ ಪುಸ್ತಕದ ವಾರಸುದಾರ ಈತನೇ ಎಂದು ದೃಢಪಡಿಸಿಕೊಂಡಳು.

'ತಮ್ಮ ಪುಸ್ತಕ ನನ್ನಲ್ಲಿದೆ'.

'ಯಾವುದು?'

'ನದಿಯಂಗ ಬದುಕಬೇಕೋ' ಅದಾ ಅಂದ. 'ಅದಕ್ಕೆ ಸಾಕಷ್ಟು ಅವಾರ್ಡ್ ಬಂದಿವೆ' ಎಂದು ಹೇಳಹತ್ತಿದ.

'ಅದು ಅಲ್ಲ... ಸಮುದ್ರದಂತ ಮನ...' ಎಂದಳು.